ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,

ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ5(1)ವರ್ಗ-01/2014-15 ದಿನಾಂಕ :18-06-2014

## ಅಧಿಕೃತ ಜ್ಞಾಪನ

ವಿಷಯ: 2014-15 ನೇ ಸಾಲಿನಲ್ಲಿ ಅಂತರ ಆಯುಕ್ತಾಲಯ ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 22 ಸೇನೌವ 2013 ದಿನಾಂಕ:07-06-2013.

2. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 22 ಸೇನೌವ 2013 ದಿನಾಂಕ:14-06-2013.
3. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 29 ಸೇನೌವ2014 ದಿನಾಂಕ:20-05-2014.
4. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 29 ಸೇನೌವ 2014 ದಿನಾಂಕ:26-05-2014.
5. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ5(1)ವರ್ಗ-01/2014-15 ದಿನಾಂಕ:28-05-2014.

—*****—

ಪ್ರಸ್ತಾವನೆ:-

ಉಲ್ಲೇಖ(1) ರ ಸರ್ಕಾರದ ಅದೇಶದಲ್ಲಿ ಸರ್ಕಾರಿ ನೌಕರರ ವರ್ಗಾವಣೆಗಳ ಬಗ್ಗೆ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆ ಹಾಗೂ (2) ರಿಂದ (4) ರಲ್ಲಿ ಸದರಿ ಮಾರ್ಗಸೂಚಿಗೆ ತಿದ್ದುಪಡಿಯನ್ನು ಹೊರಡಿಸಲಾಗಿದೆ. ಉಲ್ಲೇಖಿತ (1) ರಿಂದ (4) ರವರೆಗಿನ ಸರ್ಕಾರದ ಆದೇಶಗಳಲ್ಲಿನ ಸೂಚನೆಗಳು ಹಾಗೂ ಮಾರ್ಗ ಸೂಚಿಗಳನ್ವಯ 2014-15 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಅಧಿಕಾರಿ ಹಾಗೂ ಸಿಬ್ಬಂದಿಗಳ ವಗಾವಣೆಗಳನ್ನು ಸಕ್ಷಮ ಪ್ರಾಧಿಕಾರಿಯವಾರು ಆಯಾಯ ಕಛೇರಿಗಳಲ್ಲಿ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಈ ಕಛೇರಿಯ ಉಲ್ಲೇಖಿತ (5) ರಲ್ಲಿನ ಸುತ್ತೋಲೆಯಲ್ಲಿ ಸೂಚನೆಗಳನ್ನು ನೀಡಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ ಆಯುಕ್ತಾಲಯದ ವರ್ಗಾವಣೆಯಡಿ ಧಾರವಾಡ ಮತ್ತು ಗುಲಬರ್ಗಾ ಆಯುಕ್ತಾಲಯದಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂಧಿಗಳು ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಯಡಿಯಲ್ಲಿ ವರ್ಗಾವಣೆಯನ್ನು ಕೋರಿರುವರಿಗೆ ವರ್ಗಾವಣೆಯನ್ನು ಮಾಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಪ್ರಾಧಿಕಾರವನ್ನು ಹೊಂದಿದ್ದು, 2014-15 ನೇ ಸಾಲಿನಲ್ಲಿ ವರ್ಗಾವಣೆಗೆ ಕೋರಿ ಅರ್ಜಿ ಸಲ್ಲಿಸಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಪೈಕಿ ಅರ್ಹರಿರುವರ ಅಂತಿಮ ಅಧ್ಯತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಸದರಿ ಅಂತಿಮ ಆದ್ಯತಾ ಪಟ್ಟಿಯನ್ವಯ ದಿನಾಂಕ:07-06-2014 ರಂದು ಸ್ಥಳ ಆಯ್ಕೆಗಾಗಿ ಕೌನ್ಸಿಲಿಂಗ್ ನಡೆಸಲಾಗಿದೆ. ದಿನಾಂಕ:07-06-2014ರಂದು ನಡೆದ ಗಣಕೀಕೃತ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಬೋಧಕೇತರ ವರ್ಗದ ಸಿಬ್ಬಂದಿಗಳು ಖುದ್ದಾಗಿ ಹಾಜರಾಗಿ ವರ್ಗಾವಣೆಗೆ ಸ್ಥಳವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಅದರಂತೆ ವರ್ಗಾವಣೆಮಾಡಿ ಸ್ಥಳ ನಿಯುಕ್ತಿಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ:-

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡ ಬೋಧಕೇತರ ವೃಂದದ ಸಿಬ್ಬಂಧಿಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಹುದ್ದೆ ಮತ್ತು ಸ್ಥಳಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಅಧಿಕಾರಿಗಳ/ ಸಿಬ್ಬಂಧಿಯ ಹೆಸರು, ಹುದ್ದೆ ಮತ್ತು ವಿಳಾಸ ಶ್ರೀ / ಶ್ರೀಮತಿ | ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆ ಮಾಡಿ ಕೊಂಡಂತೆ ವರ್ಗಾವಣೆ ಮಾಡಿರುವ ಹುದ್ದೆ ಮತ್ತು ಸ್ಥಳ |
|---|---|---|
| | ಅಧೀಕ್ಷಕರು | |
| 1 | ಶ್ರೀಧರಕುಷ್ಟಗಿ, ಅಧೀಕ್ಷಕರು,ಉಪನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ,ರಾಯಚೂರು. | ಉಪನಿರ್ದೇಶಕರ ಕಛೇರಿ, ಚಿಕ್ಕಬಳ್ಳಾಪುರ [ಖಾಲಿ ಹುದ್ದೆಗೆ] |

| | | |
|---|---|---|
| **ಶೀಘ್ರಲಿಪಿಗಾರರು** | | |
| 1 | ವಿಶ್ವನಾಥ್, ಶೀಘ್ರಲಿಪಿಗಾರರು. ಡಿ.ಐ.ಇ.ಟಿ. ಬಿಜಾಪುರ. | ಉಪನಿರ್ದೇಶಕರ ಕಛೇರಿ, ಬೆಂಗಳೂರು ಗ್ರಾ. ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು |
| **ಪ್ರಥಮ ದರ್ಜೆ ಸಹಾಯಕರು** | | |
| 1 | ಲಿಂಗಪ್ಪ, ಪ್ರ.ದ.ಸ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕುಮಟಾ ಉತ್ತರ ಕನ್ನಡ ಜಿಲ್ಲೆ. | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿಕ್ಕಬಳ್ಳಾಪುರ [ಖಾಲಿ ಹುದ್ದೆಗೆ] |
| 2 | ಮೀನಾಕ್ಷಿ ಮಾರಾ, ಪ್ರ.ದ.ಸ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕುಮಟ, ಉತ್ತರ ಕನ್ನಡ ಜಿಲ್ಲೆ. | ಸ.ಪ.ಪೂ.ಕಾ [ಪ್ರೌ.ಶಾ.ವಿ] ಕೆ.ಜಿ.ಎಫ್, ಕೋಲಾರ ಜಿಲ್ಲೆ [ಖಾಲಿ ಹುದ್ದೆಗೆ] |
| **ದ್ವಿತೀಯ ದರ್ಜೆ ಸಹಾಯಕರು** | | |
| 1 | ಬಿ.ವಜ್ರಕುಮಾರ್, ದ್ವಿ.ದ.ಸ., ಸರ್ಕಾರಿ ಪ್ರೌಢಶಾಲೆ, ಮಾಡಬೂಳ, ಚಿತ್ತಾಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ. | ಸ.ಪ.ಪೂ.ಕಾ [ಪ್ರೌ.ಶಾ.ವಿ] ಬೆಳ್ತಂಗಡಿ, ದಕ್ಷಿಣ ಕನ್ನಡ ಜಿಲ್ಲೆ [ಖಾಲಿ ಹುದ್ದೆಗೆ] |
| 2 | ಪಿ.ರಮೇಶ, ದ್ವಿ.ದ.ಸ, ಘಾಸಿ ಪ್ರಭಾವತಿ ಸರ್ಕಾರಿ ಪ್ರೌಢಶಾಲೆ, ಕುಮಮ್ಮೂರ, ಬ್ಯಾಡಗಿ ತಾ:, ಹಾವೇರಿ ಜಿಲ್ಲೆ. | ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಮನಗರ [ಖಾಲಿ ಹುದ್ದೆಗೆ] |
| 3 | ಜಿ.ಪಿ.ವಿಜೇಶ್ವರಿ, ದ್ವಿ.ದ.ಸ., ಸರ್ಕಾರಿ ಪ್ರೌಢಶಾಲೆ, ಲಿಂಗೇರಿ ಸ್ಟೇಷನ್, ಯಾದಗಿರಿ ತಾಲ್ಲೂಕು | ಎಂ.ಜೆ.ಎಸ್.ವಿ, ಸ.ಪ.ಪೂ.ಕಾ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ [ಖಾಲಿ ಹುದ್ದೆಗೆ] |
| **ದ್ವಿತೀಯ ದರ್ಜೆ ಸಹಾಯಕರು [ಪರಸ್ಪರ]** | | |
| 1 | ಬಿ.ಎಸ್. ಮಂಜುನಾಥ, ದ್ವಿ.ದ.ಸ, ಪದವಿ ಪೂರ್ವ ಕಾಲೇಜು, ಹೂವಿನಡಗಲಿ, [ಪ್ರೌ.ಶಾ.ವಿ] ಬಳ್ಳಾರಿ ಜಿಲ್ಲೆ. | ಸರ್ಕಾರಿ ಪದವಿ ಪೂರ್ವ ಕಾಲೇಜು [ಪ್ರೌ.ಶಾ.ವಿ] ಅರೇಹಳ್ಳಿ, ಬೇಲೂರು ತಾ:, ಹಾಸನ ಜಿಲ್ಲೆ. [ಬಿ.ಎಂ. ಆಂಜಿನಪ್ಪ ರವರ ಸ್ಥಳಕ್ಕೆ] |
| | ಬಿ.ಎಂ.ಅಂಜೀನಪ್ಪ, ದ್ವಿ..ದ.ಸ, ಸರ್ಕಾರಿ ಪದವಿ ಪೂರ್ವ ಕಾಲೇಜು [ಪ್ರೌ.ಶಾ.ವಿ] ಅರೇಹಳ್ಳಿ, ಬೇಲೂರು ತಾ:, ಹಾಸನ ಜಿಲ್ಲೆ. | ಪದವಿ ಪೂರ್ವ ಕಾಲೇಜು, ಹೂವಿನಡಗಲಿ, [ಪ್ರೌ.ಶಾ.ವಿ] ಬಳ್ಳಾರಿ ಜಿಲ್ಲೆ. [ಬಿ.ಎಸ್. ಮಂಜುನಾಥ ರವರ ಸ್ಥಳಕ್ಕೆ] |

ಷರತ್ತುಗಳು:-

1. ಅಂತರ ಆಯುಕ್ತಾಲಯ ವರ್ಗಾವಣೆಯನ್ನು ಸಿಬ್ಬಂದಿಗಳ ಕೋರಿಕೆ ಆಧಾರದ ಮೇರೆಗೆ ವರ್ಗಾವಣೆ ಮಾಡಿರುವುದರಿಂದ ಅವರ ಜೇಷ್ಠತೆಯನ್ನು ಬೆಂಗಳೂರು ಆಯುಕ್ತಾಲಯದಡಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪರಿಗಣಿಸಲಾಗುವುದು.
2. ಕೋರಿಕೆ ವರ್ಗಾವಣೆಯಾಗಿರುವುದರಿಂದ ವರ್ಗಾವಣೆಗೊಂಡ ಅಧಿಕಾರಿಗಳು/ ಸಿಬ್ಬಂದಿಗಳು ಯಾವುದೇ ರೀತಿಯ ವರ್ಗಾವಣೆ ಭತ್ಯೆ ಹಾಗೂ ಸೇರುವಿಕೆ ಕಾಲಕ್ಕೆ ಅರ್ಹರಿರುವುದಿಲ್ಲ.
3. ಅಧಿಕಾರಿಗಳ/ಸಿಬ್ಬಂದಿಗಳ ಕೋರಿಕೆ ಮೇರೆಗೆ ವರ್ಗಾವಣೆಗೆ ಅವಕಾಶ ನೀಡಿ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿ ಮಾಡಲಾಗಿದ್ದು, ಯಾವುದೇ ಸ್ಥಳ ಮಾರ್ಪಾಡಿಗೆ ಅವಕಾಶವಿರುವುದಿಲ್ಲ.
4. ವರ್ಗಾವಣೆ ಹೊಂದಿರುವ ಅಧಿಕಾರಿಗಳ / ಸಿಬ್ಬಂದಿಗಳು ಕರ್ತವ್ಯದಿಂದ ಬಿಡುಗಡೆ ಹೊಂದುವ ಪೂರ್ವದಲ್ಲಿ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳು/ಉಪನಿದೇಶಕರು(ಆಡಳಿತ) ರವರ ಅನುಮತಿ ಪಡೆದು ಈ ಆದೇಶ ಹೊರಡಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಬಿಡುಗಡೆ ಹೊಂದಲು ತಿಳಿಸಿದೆ.
5. ವರ್ಗಾವಣೆ ಹೊಂದಿರುವ ಅಧಿಕಾರಿಗಳು/ಸಿಬ್ಬಂಧಿಗಳು ಕರ್ತವ್ಯದಿಂದ ಬಿಡುಗಡೆ ಹೊಂದಿದ ಹಾಗೂ ಕರ್ತವ್ಯಕ್ಕೆ ಹಾಜರಾದ ಬಗ್ಗೆ ಕೂಡಲೇ ಈ ಕಛೇರಿಗೆ ಮತ್ತು ಸಂಬಂಧಿಸಿದ ಎಲ್ಲಾ ಮೇಲಾಧಿಕಾರಿಗಳಿಗೆ ವರದಿ ಮಾಡುವುದು.
6. ವರ್ಗಾವಣೆ ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿದ್ದಲ್ಲಿ ಅಂತಹ ಅಧಿಕಾರಿ/ಸಿಬ್ಬಂದಿಯನ್ನೇ ಪೂರ್ಣ ಜವಾಬ್ದಾರರನ್ನಾಗಿ ಪರಿಗಣಿಸಿ, ತಪ್ಪು ಮಾಹಿತಿ ನೀಡಿದ ಕಾರಣಕ್ಕಾಗಿ ಅವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

7. ಸದರಿ ಅಧಿಕಾರಿಗಳು / ನೌಕರರು ವರ್ಗಾವಣೆಗೆ ನೀಡಿರುವ ಕಾರಣದಂತೆ ಕೌನ್ಸಿಲಿಂಗ್‌ನಲ್ಲಿ ಆದ್ಯತೆಯನ್ನು ನೀಡಲಾಗಿದ್ದು, ಸದರಿಯವರು ಸ್ಥಳ ಆಯ್ಕೆ ಪ್ರಕ್ರಿಯೆಯ ಮುಖೇನ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ. ಆದ್ಯತೆಯಲ್ಲಿ ವ್ಯತ್ಯಾಸವಿದ್ದಲ್ಲಿ ಅವರನ್ನು ಬಿಡುಗಡೆಗೊಳಿಸದೇ ಈ ಕಛೇರಿಗೆ ವರದಿ ಮಾಡಲು ತಿಳಿಸಿದೆ.
8. ಚುನಾವಣಾ ನೀತಿ ಸಂಹಿತೆಯು ಜಾರಿ ಇರುವ ಪ್ರದೇಶಗಳಲ್ಲಿ ಸಂಬಂಧಿಸಿದ ಚುನಾವಣಾ ಪ್ರಾಧಿಕರಿಗಳಿಂದ ಬಿಡುಗಡೆ ಮಾಡುವ ಬಗ್ಗೆ ಖಾತ್ರಿ ಪಡಿಸಿಕೊಂಡು ವರ್ಗಾವಣೆಗೊಂಡ ಅಧಿಕಾರಿ / ಸಿಬ್ಬಂದಿಗಳನ್ನು ಅವರ ಪ್ರಸ್ತುತ ಸ್ಥಳದಿಂದ ಬಿಡುಗಡೆ ಮಾಡಲು ತಿಳಿಸಿದೆ.

(ಆಯುಕ್ತರ ಆದೇಶದ ಮೇರೆಗೆ)

(ಕೆ.ಎಸ್. ವೆಂಕಟೇಶಪ್ಪ)
ಅಪರ ಆಯುಕ್ತರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

18/6/14

ಇವರಿಗೆ :-

1. ಸಂಬಂಧಿಸಿದ ಶಾಲಾ / ಕಾಲೇಜು / ಕಛೇರಿ ಮುಖ್ಯಸ್ಥರಿಗೆ,
2. ಸಂಬಂದಿಸಿದ ಆದಿಕಾರಿ / ಸಿಬ್ಬಂದಿಗಳಿಗೆ

ಪ್ರತಿಯನ್ನು:-

3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ ಬಹುಮಡಿ ಕಟ್ಟಡ, ಬೆಂಗಳೂರು
4. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ ಬೆಂಗಳೂರು
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ ಹಾಗೂ ಧಾರವಾಡ.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
7. ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
8. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪ್ರಾದೇಶಿಕ ಪರೀಕ್ಷಾ ಮಂಡಳಿ. ಮೈಸೂರು, ಬೆಳಗಾವಿ ಹಾಗೂ ಗುಲಬರ್ಗಾ.
9. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
10. ಸಹ ನಿರ್ದೇಶಕರು-1 ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ಸಂಬಂಧಿಸಿದ ಸಿ.ಟಿ.ಇ ಪ್ರಾಂಶುಪಾಲರುಗಳಿಗೆ.
12. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ (ಆಡಳಿತ)
13. ಸಂಬಂದಿಸಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸ-ಂಸ್ಥೆಯ ಪ್ರಾಂಶುಪಾಲರಿಗೆ
14. ಸಂಬಂದಿಸಿದ ತಾಲ್ಲೂಕು ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ.
15. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
16. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
17. ಸಮಬಂದಿಸಿದ ಶಾಲಾ / ಕಾಲೇಜುಗಳ ಮುಖ್ಯಸ್ಥರುಗಳಿಗೆ
18. ಕಛೇರಿ ಪ್ರತಿ